ಕೊಡಗು ಜಿಲ್ಲೆಯಲ್ಲಿ ಅಬಕಾರಿ ಹರಾಜಿನಿಂದ ಬಂದ ಆದಾಯ

4375 (4976) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003–04ನೇ ಸಾಲಿನಲ್ಲಿ ಅಬಕಾರಿ ಹರಾಜಿನಿಂದ ಎಷ್ಟು ಆದಾಯ ಬಂದಿರುತ್ತದೆ?

ಆ) ಕೊಡಗು ಜಿಲ್ಲೆಯ ಹರಾಜನ್ನು ಮೂರು ಬಾರಿ ಮುಂದೂಡಲು ಕಾರಣವೇನು?

ಕೊಡಗು ಜಿಲ್ಲೆಯ ಅಬಕಾರಿ ಹರಾಜಿನಿಂದ ಸರ್ಕಾರಕ್ಕೆ ಎಷ್ಟು ಆದಾಯ ಬಂದಿರುತ್ತದೆ? (ವಿವರ ನೀಡುವುದು)

ಇ) ರಾಜ್ಯದಲ್ಲಿ ಎಷ್ಟು ಹೊಸ ಮದ್ಯದಂಗಡಿಗಳಿಗೆ ಪರವಾನಗಿ ನೀಡಲಾಗಿದೆ? (ಜಿಲ್ಲಾವಾರು ವಿವರ ಒದಗಿಸುವುದು)

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

ಅ) ಬಾಡಿಗೆ ರೂಪದಲ್ಲಿ ಮಾಸಿಕ ರೂ. 72.79 ಕೋಟಿಗಳು.

ಆ) ಹೆಚ್ಚಿನ ರಾಜಸ್ವ ಗಳಿಸುವ ಉದ್ದೇಶದಿಂದ ಆರು ಬಾರಿ ಅಬಕಾರಿ ಹರಾಜನ್ನು ನಡೆಸಲಾಯಿತು.

2003–04ನೇ ಸಾಲಿನಲ್ಲಿ ಮಾಸಿಕ ರೂ. 1.85 ಕೋಟಿಗಳು. ವಿವರಗಳು ಈ ಕೆಳಗಿನಂತಿದೆ:

1. ಮಡಿಕೇರಿ – ರೂ. 36,39,000/–
2. ವಿರಾಜಪೇಟೆ – ರೂ. 91,05,535/–
3. ಸೋಮವಾರಪೇಟೆ – ರೂ. 57,77,777/–

ಒಟ್ಟು ರೂ. 1,85,22,312/–

ಇ) ಹೊಸದಾಗಿ ಪರವಾನಗಿಯನ್ನು ನೀಡಿಲ್ಲ.

ರಾಜ್ಯ ಸರ್ಕಾರಿ ನೌಕರರಿಗೆ ಗಿರಿಭತ್ಯೆ ನೀಡುವಲ್ಲಿ ಆಗುತ್ತಿರುವ ತಾರತಮ್ಯ ಹಾಗೂ ವಿಳಂಬ

4376 (5051) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ನೌಕರರಿಗೆ ಗಿರಿಭತ್ಯೆ ಕೊಡುವಲ್ಲಿ ತಾರತಮ್ಯ ಉಂಟಾಗುತ್ತಿರುವುದು ನಿಜವೇ: ಹಾಗಿದ್ದಲ್ಲಿ, ಕಾರಣವೇನು.

ಆ) ಮಡಕೇರಿಯಂತೆ ಸೋಮವಾರಪೇಟೆ ಮತ್ತು ವೀರಾಜಪೇಟೆ ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ ಈ ತಾಲ್ಲೂಕಿಗೆ ಗಿರಿಭತ್ಯೆ ಕೊಡಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಇ) ರಾಜ್ಯದಲ್ಲಿರುವ ಗುಡ್ಡಗಾಡು, ಗಿರಿಜನ ಪ್ರದೇಶಗಳಾವುವು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಇಲ್ಲ. ಎಲ್ಲೆಲ್ಲಿ ಗಿರಿಭತ್ಯೆ ನೀಡಲಾಗುತ್ತಿದೆಯೋ ಅದನ್ನು ಜಾರಿಯಲ್ಲಿರುವ ಸರ್ಕಾರಿ ಆದೇಶದನ್ವಯ ಯಾವುದೇ ತಾರತಮ್ಯವಿಲ್ಲದೆ ನೀಡಲಾಗುತ್ತಿದೆ.